ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಡಾ: ಎ.ಬಿ. ಮಲಕರೆಡ್ಡಿ (ಸದಸ್ಯರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:- ಎಲ್ಲಾ ವರದಿಗಳೂ ಸಭೆಯಲ್ಲಿ ಮಂಡಿಸಲ್ಪಟ್ಟವು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ:- ಪಶುಸಂಗೋಪನಾ ಇಲಾಖೆಯ ಕಾವಲುಗಾರರು ಮತ್ತು ಷೇರ್ವೆಗಾರರು ಕಾವಲು ಭೂಮಿಯ ಉಳುಮೆ ಮಾಡುತ್ತಿರುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 18(338)

ಶ್ರೀ ಬಿ. ಶಿವರಾಮು (ಗಂಡಸೀ)

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರುಸುವರೇ

ಅ) ಪಶುಪಾಲನೆ ಇಲಾಖೆಯ ಕಾವಲುಗಾರರು ಮತ್ತು ಷೇರ್ವೆಗಾರರು ಬಹಳ ದಿವಸದಿಂದ ನಿರಂತರವಾಗಿ ಕಾವಲು ಭೂಮಿಯ ಉಳಿಮೆ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?:- ಕಾವಲುಗಾರರು ಕಾವಲು ಭೂಮಿಯನ್ನು ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಂದಿದ್ದರೆ ಒಟ್ಟು ಎಷ್ಟು ಮಂದಿ ಉಳುಮೆ ಮಾಡುತ್ತಿದ್ದಾರೆ, ಮತ್ತು ಅದರ ವಿಸ್ತೀರ್ಣವೆಷ್ಟು ? :- 1. 136 ಕಾವಲುಗಾರರು ಉಳಿಮೆ ಮಾಡುತ್ತಿರುತ್ತಾರೆ.

2. ವಿಸ್ತೀರ್ಣ 680 ಎಕರೆ

ಇ) ಉಳಿಮೆ ಮಾಡುತ್ತಿರುವ ಭೂಮಿಯನ್ನು ಕಾವಲುಗಾರರು ಮತ್ತು ಷೇರ್ವೆಗಾರರಿಗೆ ಮಂಜೂರಾತಿ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ ? :- ಅವಕಾಶವಿರುವುದಿಲ್ಲ.

ಈ) ಇಲ್ಲದಿದ್ದರೆ ಕಾನೂನಿಗೆ ತಿದ್ದುಪಡಿ ತಂದು ಅರ್ಹತೆಯ ಆಧಾರದ ಮೇಲೆ ಮಂಜೂರಾತಿ ಮಾಡಲು ಸರ್ಕಾರದವರು ಪರಿಶೀಲಿಸುವರೆ ? :- ಇಲ್ಲ

ಉ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ? :- ಕಾವಲುಗಾರರಿಗೆ ಕಾವಲು ಮಾಡಲು ಪ್ರೋತ್ಸಾಹವಾಗಿ ಒಬ್ಬ ಕಾವಲುಗಾರನಿಗೆ 20 ಎಕರೆಯನ್ನು ಅಮೃತ್ ಮಹಲ್ ಕಾವಲ್‌ನ ದನಗಳನ್ನು ಮೇಯಿಸಲು ಹಾಗೂ 5 ಎಕರೆಯನ್ನು ಸ್ವಂತ ಬೇಸಾಯಕ್ಕಾಗಿ ನೀಡಲಾಗುತ್ತಿದ್ದು, ಕಾವಲುಗಾರನಾಗಿ ಮುಂದುವರೆಯುವವರೆಗೆ ಮಾತ್ರ ಈ ಸೌಲಭ್ಯ ಇರುತ್ತದೆ. ಕಾವಲುಗಾರರು ಇಲಾಖೆಯ ಖಾಯಂ ನೌಕರರಲ್ಲ. ಆದ್ದುರಿಂದ, ಖಾಯಂ ಆಗಿ (ಸಾಮಾಜಿಕ ಹುಲ್ಲುಗಾವಲು' ಸದರಿ ಜಮೀನನ್ನು ನಿಯಮಾನುಸಾರ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಬಿ.ಬಿ.ನಿಂಗಯ್ಯ

(ಪಶು ಸಂಗೋಪನಾ ರಾಜ್ಯ ಸಚಿವರು)

ಶ್ರೀ ಬಿ. ಶಿವರಾಮು:- ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕಾವಲುಗಾರರು ನಿರಂತರವಾಗಿ ಭೂಮಿಯನ್ನು ಉಳುತ್ತಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ಜೊತೆಗೆ ಅವರ ಕರ್ತವ್ಯಕ್ಕೆ ತಕ್ಕಂತೆ ಆ ಭೂಮಿಯನ್ನು ಮಂಜೂರಾತಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅಧ್ಯಕ್ಷರೆ, ಈ ವಿಚಾರ ಗೊತ್ತು, ಒಂದು ವಿಚಾರವನ್ನು ನಾನು ಇಲ್ಲಿ ಕೇಳುವುದಕ್ಕೆ ಬಯಸುತ್ತೇನೆಂದರೆ, ಕಾನೂನಿಗೆ ತಿದ್ದುಪಡಿ ತಂದು ಅರ್ಹತೆಯ ಆಧಾರದ ಮೇಲೆ ಮಂಜೂರಾತಿ ಮಾಡಲು ಸರ್ಕಾರ ಏನಾದರೂ ಪರಿಶೀಲನೆ ಮಾಡಿದೆಯೇ ಎನ್ನತಕ್ಕಂಥದ್ದೇ ಮುಖ್ಯವಾದ ವಿಚಾರ. ಅವರು ಇಲ್ಲ ಎಂದು ಹೇಳಿದ್ದಾರೆ. ಆದರೆ ಹೋದ ಸದನದಲ್ಲಿ, ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ಸಾವಿರದ ಒಂಬೈನೂರತ್ತೊಂಭತ್ತ ಮೂರಕ್ಕೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಸಾವಿರದ ಒಂಬೈನೂರತ್ತೋಂಬತ್ತ ನಾಲ್ಕು ತ್ತೊಂಬತ್ತೆದರ ಪ್ರಾರಂಭದಲ್ಲಿ ಅನಧಿಕೃತ ಸಾಗುವಳಿ ಮತ್ತು ಕಾವಲುಗಾರರಿಗೆ, ಷೇರ್ವೆಗಾರರಿಗೆ ನಿರಂತರ ಅಮೃತ್ ಮಹಲ್ ಸಾಗುವಳಿ ಭೂಮಿಯನ್ನು ಮಂಜೂರಾಗಿ ಸಭೆಯನ್ನು ನಡೆಸಿ, ಅಭಿಪ್ರಾಯ ಪಡೆದು ಕಾನೂನು ಸಲಹೆಗೆ ಇಲಾಖೆಗೆ ಹೋಗಿರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಎಂದು ಹೇಳಿದ್ದಾರೆ. ನಾನು ಇದನ್ನು ಮೂಲಭೂತವಾಗಿಟ್ಟುಕೊಂಡು ಇದಕ್ಕೆ ಏನಾದರೂ ಪರಿಹಾರ ತರುವುದಕ್ಕೆ ಸರ್ಕಾರ ತಿದ್ದುಪಡಿ ಮಾಡಿದೆಯಾ ಎನ್ನುವುದಕ್ಕೆ ನಾನು ಈ ಪ್ರಶ್ನೆಯನ್ನು ಹಾಕಿದ್ದು, ಹಿಂದೆ ಆ ಪ್ರಶ್ನೆಗೆ ಉತ್ತರದಲ್ಲಿ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ, ಇನ್ನೊಂದು ಸಾರಿ ಇಲ್ಲ ಎಂದು ಹೇಳುತ್ತಾರೆ ಅದಕ್ಕೆ ಈ ಬಗ್ಗೆ ಏನು ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ನನಗೆ ಉತ್ತರ ಒದಗಿಸಬೇಕಾಗಿದೆ.

ಶ್ರೀ ಬಿ.ಬಿ.ನಿಂಗಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ನಾನು ಸ್ಪಷ್ಟವಾಗಿ ಉತ್ತರಗಳನ್ನು ಒದಗಿಸಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ಆರು ಜಿಲ್ಲೆಗಳಲ್ಲಿ ಐವತ್ತೆಂಟು ಅಮೃತ್ ಮಹಲ್ ಕಾವಲ್‌ಗಳು ಬರುತ್ತವೆ.

ಅಧ್ಯಕ್ಷರು:- ಇಲ್ಲ ಇಲ್ಲ, ನಿಂಗಯ್ಯನವರೇ ಅವರು ಕೇಳಿದ್ದುದು ಇಷ್ಟೆ ಹೋದ ಸಲ ಇದೇ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಈ ವರ್ಷ ಇಲ್ಲ ಎಂದು ಹೇಳಿದ್ದೀರಿ ಅಷ್ಟೇ ಅವರ ಪ್ರಶ್ನೆ. ಅದಕ್ಕೆ ಉತ್ತರ, ಪರಿಶೀಲನೆ ಮಾಡಿ ಅನಂತರ ಇದನ್ನು ಕೈಬಿಟ್ಟುಬಿಟ್ಟಿದ್ದೀರಾ ? ಅದರಿಂದ ಈಗ ಇಲ್ಲವೆಂದು ಹೇಳಿದ್ದೀರಾ ಅಥವಾ ಅದೇನಾದರೂ ತಪ್ಪಾಗಿದ್ದರೆ ಅದನ್ನು ಹೇಳಿಬಿಡಿ.

ಶ್ರೀ ಬಿ.ಬಿ.ನಿಂಗಯ್ಯ:- ನಮ್ಮಲ್ಲಿರತಕ್ಕಂಥ ಭೂಮಿಯನ್ನು ಯಾವುದೇ ಕಾರಣಕ್ಕೂ ಎಂಕ್ರೋಚ್‌ಮೆಂಟ್ ಮಾಡಿರತಕ್ಕಂಥಕ್ಕೆ ಕೊಡಲಿಕ್ಕಾಗುವುದಿಲ್ಲ. ಆ ಮೇಲೆ ಜೊತಗೆ ಏನು ಕಾವಲುಗಾರರು, ಷೇರ್ವೆಗಾರರು ಈ ಅಮೃತ್ ಮಹಲ್ ಕಾವಲನ್ನು ನೋಡಿಕೊಳ್ಳುತ್ತಿದ್ದಾರೆ ಅವರಿಗೆ ಕೊಟ್ಟಿರತಕ್ಕಂಥ ಅವಧಿ, ಷೇರ್ವೆಗಾರರು ಎನ್ನತಕ್ಕಂಥದವರಿಗೆ ಸುಮಾರು ಡಿ.ದರ್ಜೆ ನೌಕರರ ಸಂಬಳವನ್ನು ಕೊಟ್ಟು ಅದೊಂದು ಪಿಂಚಣಿ ರಹಿತ ಕೆಲಸವಾಗಿರುತ್ತದೆ. ಅವರಿಗೆ ಆ ಕೆಲಸ ಮುಗಿದ ಮೇಲೆ ಯಾವುದೇ ರೀತಿಯಾಗಿ ಭೂಮಿಯಲ್ಲಿ ಅವಕಾಶವಿರುವುದಿಲ್ಲ. ಹಾಗೆಯೇ ಅಲ್ಲಿ ಏನು ಕಾವಲುಗಾರರಿದ್ದಾರೆ, ಅವರು ತಮ್ಮ ಹಸುಗಳನ್ನು ಮೇಯಿಸಿಕೊಳ್ಳುವುದಕ್ಕೆ ಇಪ್ಪತ್ತು ಎಕರೆ ಮತ್ತೆ ಅವರು ಕಾವಲು ಮಾಡುವ ತನಕ ಕೃಷಿ ಮಾಡುವುದಕ್ಕೆ ಐದು ಎಕರೆ ಜಮೀನು ಕೊಡತಕ್ಕಂಥ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅವರು ಅಲ್ಲಿಂದ ಬಿಟ್ಟು ಹೋಗತಕ್ಕಂಥ ಸಂದರ್ಭದಲ್ಲಿ ಆ

ಭೂಮಿಯನ್ನು ಯಾವುದೇ ಕಾರಣಕ್ಕೆ ಅವರಿಗೆ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಆದ್ದರಿಂದ ಇದರಲ್ಲಿ ಯಾವುದೇ ರೀತಿ, ಈಗ ಇರತಕ್ಕಂಥ ಭೂಮಿ ಬಹಳ ಕಡಿಮೆಯಾಗಿರುವುದರಿಂದ ಆ ಭೂಮಿಯನ್ನು ಕೊಡಲಿಕ್ಕೆ ಅವಕಾಶವಿಲ್ಲ.

ಶ್ರೀ ಬಿ.ಶಿವರಾಮು :- ಅಧ್ಯಕ್ಷರೆ, ಐವತ್ತೆಂಟು ಕಾವಲುಗಳಿದ್ದಾವೆ ಎಂದು ಏನು ಹೇಳಿದ್ದೀರಿ ಈಗಾಗಲೇ ಅದರಲ್ಲಿ ಬಹಳಷ್ಟು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ಅರಣ್ಯ ಇಲಾಖೆಗೂ ವರ್ಗಾವಣೆ ಮಾಡಿದ್ದಾರೆ. ಆದರೆ ಈ ಕಾವಲುಗಾರರು ನಿರಂತರವಾಗಿ ಭೂಮಿಯನ್ನು ಉಳುಮೆ ಮಾಡಿಕೊಂಡು ಬರುತ್ತಿದ್ದರು ಆ ಭೂಮಿಯನ್ನು ಇವರ್ಯಾರಿಗೂ ವರ್ಗಾಮಾಡುವುದಕ್ಕಾಗಿಲ್ಲ, ಅವರು ಇನ್ನು ಉಳುಮೆ ಮಾಡುತ್ತಲೇ ಇದ್ದಾರೆ. ಇನ್ನು ತಮ್ಮ ಮೂಲಕ ಸನ್ಮಾನ್ಯ ನಾಗೇಗೌಡರ ಗಮನವನ್ನು ಸೆಳೆಯುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ, ಅವರು ಪಶುಸಂಗೋಪನಾ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಒಂದು ಸಭೆಯನ್ನು ಮೂರು ಸಾರಿ ನಿರಂತರವಾಗಿ ಮಾಡಿ ಕಾನೂನು ಸಲಹೆಗಾರರನ್ನು ಕೂಡ ಕರೆಯಿಸಿ, ಅವರಿಗೆ ಏನು ಮಾಡಬೇಕು, ಅವರಿಂದ ಭೂಮಿಯನ್ನು ಬಿಡಿಸುವುದಕ್ಕಾಗುವುದಿಲ್ಲ, ತಿದ್ದುಪಡಿಯನ್ನು ತರುವುದಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ಆಗಲೇ ವ್ಯವಸ್ಥೆಯನ್ನು , ಮಾಡಿ, ಅದು ಈಗಾಗಲೇ ಕಾನೂನು ಇಲಾಖೆಗೆ ತಿದ್ದುಪಡಿಗೆ ಹೋಗಿದೆ. ನಾನು ಮೂಲಭೂತವಾಗಿ ಅದನ್ನೇ ಕೇಳುತ್ತಿದ್ದೇನೆ, ಆ ಪ್ರಸ್ತಾವನೆ ಅಲ್ಲೇ ಇದೆ ಮುಂದುವರೆಯುತ್ತಿಲ್ಲ, ಅದಕ್ಕೆ ಒಂದು ಪರಿಹಾರ ಹುಡುಕಲಿಕ್ಕೆ ಹಿಂದೆ ಸರ್ಕಾರ ಒಂದು ವ್ಯವಸ್ಥೆಯನ್ನು ಮಾಡಿ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಮುಖ್ಯಸ್ಥರನ್ನು ಕರೆಸತಕ್ಕಂಥಾದ್ದನ್ನು ಮಾಡಿ, ಕಾವಲುಗಾರರನ್ನು ಕೂಡ ಕರೆಸಿ ಒಂದು ವ್ಯವಸ್ಥೆಯನ್ನು ಮಾಡಿದ್ದರು. ಅದನ್ನೆನಾದರೂ ತಾವು ಪರಿಹಾರ ಕೊಡತಕ್ಕಂಥಾದ್ದಕ್ಕೆ ತಮ್ಮಲ್ಲಿಅವಕಾಶ ಅಥವಾ ಚಿಂತನೆ ಇದೆಯೇ ಎನ್ನತಕ್ಕಂಥಾದ್ದು ಮೂಲಭೂತವಾದಂಥ ಪ್ರಶ್ನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೇ, ನಮ್ಮ ಗಂಡಸಿ ಶಾಸಕರು ಏನು ಹೇಳಿದರೋ ಅದರ ಬಗ್ಗೆ ತಮ್ಮನ್ನು ಒಂದು ಉಪ ಪ್ರಶ್ನೆ ಕೇಳುತ್ತಿದ್ದೇನೆ. ಅಮೃತ ಮಹಲ್ ಕಾವಲನ್ನು ಕಡೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರಿಗೆ ಕೊಟ್ಟಿದ್ದಾರೆ. ಬಾಸೂರು ಕಾವಲಿನಲ್ಲಿ ಕೊಟ್ಟಿದ್ದಾರೆ. ಬೆಳುವಾಲ ಕಾವಲಿನಲ್ಲೂ ಕೂಡ ಕೊಟ್ಟಿದ್ದಾರೆ. ಅಲ್ಲಿ ಅರಣ್ಯ ಇಲಾಖೆಯವರು ನೀಲಗಿರಿಯನ್ನು ಬೆಳೆಯುತ್ತಿದ್ದಾರೆ. ಅಮೃತ ಮಹಲ್ ಕಾವಲನ್ನು ಮಹಾರಾಜರ ಕಾಲದಿಂದ ಉಳಿಸಿರುವ ಉದ್ದೇಶವೆಂದರೆ ಅಮೃತ ಮಹಲ್ ತಳಿಗಳಿಗೆ ಮೇವನ್ನು ಬೆಳೆಯುವುದು, ಆ ತಳಿಗಳನ್ನು ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕಾಗಿ ಅದಕ್ಕೆ ಅರಣ್ಯ ಇಲಾಖೆಯವರಿಗೆ ಸರ್ಕಾರ ನೀಲಗಿರಿ ಮತ್ತು ಅಕೇಶಿಯಾ ಗಿಡಗಳನ್ನು ಬೆಳೆಯಲಿಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವ ವಿಷಯವನ್ನು ಸರ್ಕಾರ ಅಧಿಕಾರಿಗಳಿಗೆ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ್ದಕ್ಕೆ ಈ ಹಿಂದೆ ನಾನು ಉತ್ತರವನ್ನು ಹೇಳಿದ್ದೇನೆ. ಮಾನ್ಯ ನಮ್ಮ ಕೃಷ್ಣಮೂರ್ತಿಯವರು ಹೇಳಿದ ಹಾಗೆ, ಅಲ್ಲಿರತಕ್ಕಂಥ ಭೂಮಿ ಹಸುಗಳಿಗೆ ಮೇವು ಒದಗಿಸುವುದಕ್ಕೆ ಮತ್ತು ಅಮೃತ ಮಹಲ್ ತಳಿ ಏನಿದೆ ಅವುಗಳನ್ನು ಸಾಕಲಿಕ್ಕೆ ಕೊಟ್ಟಿರತಕ್ಕಂಥ ಭೂಮಿ ಈಗ ಸಾಕಷ್ಟು ಅವರು ಹೇಳಿರತಕ್ಕಂಥ ವಿಚಾರ ನಿಜ ಕೂಡ. ಅಲ್ಲಿ ಕೆಲವೊಂದು ಎನ್‌ಕ್ರೋಚ್‌ಮೆಂಟ್ ಆಗಿರತಕ್ಕಂಥಾದ್ದು ಇದೆ. ಅದನ್ನು ಸರ್ಕಾರ ಈಗಾಗಲೇ ಪರಿಶೀಲನೆ

ಮಾಡುತ್ತಿದೆ. ಏನು ಎನ್‌ಕ್ರೋಚ್‌ಮೆಂಟ್ ಆಗಿದೆ. ಆ ಪೂರ್ತಿ ಭೂಮಿಯನ್ನು ವಾಪಸ್ಸು ಪಡೆಯಬೇಕು ಎಂದು ಅದಕ್ಕೆ ಕ್ರಮ ಕೈಗೊಳ್ಳಬೇಕು ಎನ್ನತಕ್ಕಂಥದ್ದಕ್ಕೆ ಈಗಾಗಲೇ ಸಭೆ ಕೂಡ ಮಾಡಿದ್ದೇವೆ. ಜೊತೆ ಕಾವಲುಗಾರರಿಗೆ ಕೊಡುತ್ತಾ ಹೋದರೆ, ಪ್ರತಿಸಾರಿ ನಾವು ಕಾವಲುಗಾರರನ್ನು ಅಪಾಯಿಂಟ್ ಮಾಡುವುದರಿಂದ ಅಲ್ಲಿ ಭೂಮಿಯೇ ಉಳಿಯುವುದಿಲ್ಲ. ಯಾವ ಉದ್ದೇಶಕ್ಕಾಗಿ ಅಮೃತ ಮಹಲ್ ಕಾವಲು ಎನ್ನತಕ್ಕಂಥಾದ್ದನ್ನು ಹಿಂದಿನಿಂದ ಸರ್ಕಾರ ಮಾಡುತ್ತಾ ಬಂತು, ಆ ಉದ್ದೇಶಕ್ಕೆ ಪೆಟ್ಟು ಬೀಳುವುದರಿಂದ ಆ ಭೂಮಿಯನ್ನು ಯಾವುದೇ ಕಾರಣಕ್ಕೂ ಕೊಡಲಿಕ್ಕೆ ಬರುವುದಿಲ್ಲ ಎಂದು ನಾನು ಖಂಡಾಖಂಡಿತವಾಗಿ ಹೇಳುತ್ತೇನೆ. ಮತ್ತೊಬ್ಬ ಸದಸ್ಯರಾದ ಶ್ರೀಮಾನ್ ಕೃಷ್ಣಮೂರ್ತಿಯವರು ಕೇಳಿದ ಪ್ರಶ್ನೆಗೆ ಉತ್ತರವೆಂದರೆ ನಾನು ಈಗಾಗಲೇ ಆ ಇಲಾಖೆ ಬಗ್ಗೆ ಚರ್ಚೆ ಮಾಡಿ ಅಕೇಶಿಯಾ ಮತ್ತು ನೀಲಗಿರಿ ಬೆಳೆಯತಕ್ಕಂಥಾದ್ದು ಇದ್ದರೆ ಕೂಡಲೇ ಅದರ ಬಗ್ಗೆ ನಾನು ನಿರ್ಧಾರ ತೆಗೆದುಕೊಂಡು ಮುಂದೆ ಹಾಗೆ ಆಗದ ಹಾಗೆ ಎಚ್ಚರಿಕೆ ವಹಿಸುತ್ತೇವೆ.

ಶ್ರೀ ಹೆಚ್.ಶಿವಪ್ಪ:- ಅಧ್ಯಕ್ಷರೇ, ಈ ಪ್ರಶ್ನೆಯಲ್ಲಿ ''ಇಲ್ಲದಿದ್ದರೆ ಕಾನೂನಿಗೆ ತಿದ್ದುಪಡಿ ತರುವ ಅರ್ಹತೆಯ ಆಧಾರದ ಮೇಲೆ ಮಂಜೂರಾತಿ ಮಾಡಲು ಸರ್ಕಾರದವರು ಪರಿಶೀಲಿಸುವುರೇ ಅಂದಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ.'' ನಂತರ 'ಉ' ಪ್ರಶ್ನೆಗೆ ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ಎಂದರೆ ಈಗ ಏನು ವ್ಯವಸ್ಥೆ ಇದೆಯೋ ಅದನ್ನುಹೇಳಿದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮಂಜೂರಾತಿ ಮಾಡುವುದರ ಬಗ್ಗೆಯಾಗಲೀ ಅಥವಾ ತಿದ್ದುಪಡಿ ಮಾಡುವುದರ ಬಗ್ಗೆಯಾಗಲೀ ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೇ, ಇಲ್ಲವೇ ಎನ್ನುವುದಕ್ಕೆ ಉತ್ತರ ಬೇಕಾಗಿದೆಯೇ ಏನಹ ಈಗ ಇರತಕ್ಕಂಥ ಈ ವ್ಯವಸ್ಥೆಯನ್ನು ಈಗ ಕೊಡುತ್ತಿದ್ದೇವೆ, ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇದಕ್ಕೆ ಮಂತ್ರಿಗಳು ಕ್ಲಾರಿಫಿಕೇಷನ್ ಕೊಡುತ್ತೀರೇನು ಸ್ವಾಮಿ ?

ಶ್ರೀ ಬಿ.ಬಿ.ನಿಂಗಯ್ಯ:- ಸನ್ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ಕಾವಲುಗಾರರಿಗೆ ಅವರು ಕಾವಲನ್ನು ಮಾಡಿಕೊಂಡು ಇರುವವರೆಗೆ 25 ಎಕರೆ ಯನ್ನು ಕೊಡತಕ್ಕಂಥಾದ್ದಕ್ಕೆ ನಾವು ಒಂದು ಅವಕಾಶವನ್ನು ಮಾಡುತ್ತೇವೆ.

ಶ್ರೀ ಹೆಚ್.ಶಿವಪ್ಪ:- ಅದು ಸರಿ ಸ್ವಾಮಿ, ಅದು ಇದ್ದೇ ಇದೆ. What are the steps taken by the Government to either amend the existing rules or to Sacntion these lands ?

MR.SPEAKER:- He has made it categorically clear that the Government has no intention of sanctioning these lands.

ಶ್ರೀ ಹೆಚ್.ಶಿವಪ್ಪ:- 'ಉ' ಉತ್ತರ ಕೊಟ್ಟಿರುವುದು ಸರಿ ಇದೆಯೇ, ಇಲ್ಲವೇ ಎನ್ನುವುದನ್ನು ತಾವು ದಯವಿಟ್ಟು ನೋಡಬೇಕು.

ಅಧ್ಯಕ್ಷರು: ಈಗ ಏನು ಪದ್ಧತಿ ಇದೆ, ಗುತ್ತಿಗೆ ಕೊಡತಕ್ಕಂಥಾದ್ದು ಅದನ್ನು

ಮುಂದುವರೆಸಿಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಬಿ.ಬಿ.ನಿಂಗಯ್ಯ:- ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. 25 ಎಕರೆ ಭೂಮಿಯನ್ನು ಕೊಡುತ್ತೇವೆಂದು.

ಶ್ರೀ ಹೆಚ್.ಶಿವಪ್ಪ:- ಕೊನೆಯ ಪಕ್ಷ ಅದೇನಾದರೂ ಸರ್ಕಾರದ ಥಿಂಕಿಂಗ್‌ನಲ್ಲಿದೆಯೇ ? ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ.ಬಿ.ನಿಂಗಯ್ಯ:- ಇಲ್ಲ.

ಅಧ್ಯಕ್ಷರು:- ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಎನ್.ನಂಜೇಗೌಡ:- ಅಧ್ಯಕ್ಷರೇ ತಳವಾರರಿದ್ದರು, ತೋಟಿಗಳು ಇದ್ದರು, ಹಾಗೆಯೇ ದೇವಾಲಯದ ಜಮೀನು ಅನುಭವಿಸುತ್ತಾ ಇದ್ದಂಥ ಜನ ಇದ್ದರು. ಅವೆಲ್ಲವನ್ನೂ ಅಭಾಲಿಷ್ ಮಾಡಿದ ಮೇಲೆ ಇರುವ ಜಮೀನನ್ನು ಅವರ ಹೆಸರಿಗೆ ಖಾಯಂ ಮಾಡಿಕೊಟ್ಟರು. ಇಲ್ಲಿ ಅವರಿಗೆ 25 ಎಕರೆ ಕೊಡಿ ಎಂದು ಹೇಳುತ್ತಿಲ್ಲ. ಐದೈದು ಎಕರೆಯನ್ನು ನಂಬಿಕೊಂಡಿದ್ದಾರಲ್ಲಾ, it is the source of their livelihood. ಈಗ ಯಾರ್‍ಯಾರೋ ಹಾದಿಯಲ್ಲಿ ಹೋಗುವವರನ್ನೆಲ್ಲಾ ಕರೆದು ಸರ್ಕಾರದವರು ಜಮೀನು ಮಂಜೂರು ಮಾಡುತ್ತೀರಿ. ಹತ್ತಾರು ವರ್ಷದಿಂದ ಅದನ್ನು ನಂಬಿಕೊಂಡು ಅದರಲ್ಲಿ ಜೀವನ ಹಾಯಿಕೊಂಡು ಕುಳಿತಿರುವವರಿಗೆ ಐದೈದು ಎಕರೆ ಜಮೀನು ಕೊಡುವುದಿಲ್ಲ ಎಂದರೆ ಏನು ? The Government have to consider this seriously. ಏಕೆಂದರೆ ಹಿಂದೆ ಅವರು ಕಾವಲು ಕಾಯುತ್ತಿದ್ದರು. ಈಗ ಕಾವಲುಗಳನ್ನು ಯಾರುಯಾರೋ ಕೊಂಡುಕೊಂಡಿದ್ದಾರೆ. ಈಗ ಅವರು ಉತ್ತುಕೊಳ್ಳುತ್ತಿರುವ ಐದು ಎಕರೆಯನ್ನಾದರೂ ಮಂಜೂರು ಮಾಡಿಕೊಡುವುದಕ್ಕೆ ಆಗುವುದಿಲ್ಲವೇ ? ಇವರು 136 ಜನ ಇದ್ದಾರೆ. 136 ಜನಕ್ಕೆ ಐದೈದು ಎಕರೆ ಕೊಡಲು ಆಗುವುದಿಲ್ಲವೇ ?

ಅಧ್ಯಕ್ಷರು:- ಸಚಿವರು ಹೇಳುತ್ತಿದ್ದಾರೆ, ಅಮೃತ ಮಹಲ್ ತಳಿ ಏನಿದೆ ಅದನ್ನು ನಾವು ಅಭಿವೃದ್ಧಿಗೊಳಿಸುವ ಉದ್ದೇಶಕ್ಕಾಗಿ, ಮೇವು ಬೆಳೆಸುವುದಕ್ಕೆ ಎಂದು ಮಹಾರಾಜರ ಕಾಲದಿಂದ ಕೊಡುತ್ತಾ ಬಂದಿದ್ದರು ಎಂದು.

ಶ್ರೀ ಹೆಚ್.ಎನ್.ನಂಜೇಗೌಡ:- ಅದು ಇವತ್ತಲ್ಲ, ಅಮೃತ ಮಹಲ್ ಕಾವಲು ಬಹಳ ಹಿಂದಿನಿಂದ ಮಹಾರಾಜರ ಕಾಲದಿಂದ ಇತ್ತು.

ಅಧ್ಯಕ್ಷರು:- ಮೇವು ಬೆಳೆಸುವುದಕ್ಕೆ ಎಂದು ಹೇಳಿ ಮೀಸಲು ಇಟ್ಟುಕೊಂಡಿತಕ್ಕ ಭೂಮಿ.

ಶ್ರೀ ಹೆಚ್.ಎನ್.ನಂಜೇಗೌಡ:- ಅಮೃತ ಮಹಲ್ ಕಾವಲುಗಳಲ್ಲಿ ಕೆಲವು ಕೊಟ್ಟಿದ್ದಾರೆ. ಅವುಗಳು ಇವತ್ತು ಸರ್ಕಾರದಲ್ಲಿ ಇಲ್ಲ ಎಂದು ನಾನು ಹೇಳುತ್ತೇನೆ. ಅವರು ಏನು ಐದು ಎಕರೆ ಉತ್ತುಕೊಳ್ಳುತ್ತಿದ್ದರೋ ಅವರಿಗೆ ಖಾಯಂ ಮಾಡಿಕೊಟ್ಟಿಲ್ಲ ಆ ಐದೈದು ಎಕರೆ ಅವರಿಗೆ ಕೊಡುವುದಕ್ಕೆ ಏನು ? ಅದನ್ನಾದರೂ ಮಂಜೂರು ಮಾಡಲಿ.

ಅಧ್ಯಕ್ಷರು:- ಪರಿಶೀಲನೆ ಮಾಡಿ.

ಶ್ರೀ ಬಿ.ಶಿವರಾಮು:- ಅಧ್ಯಕ್ಷರೇ, ಮಂತ್ರಿಗಳು ಹೇಳುವುದಕ್ಕೆ ಮುಂಚೆ ಒಂದು ಪ್ರಶ್ನೆ

ಕೇಳುತ್ತೇನೆ.

ಅಧ್ಯಕ್ಷರು:- ಎಲ್ಲಾರೂ ಒಟ್ಟಿಗೆ ಮಾಡಿ. ಈಗ ಕೊನೆಯ ಉಪಪ್ರಶ್ನೆ ಶಿವರಾಮುರವರಿಂದ.

ಶ್ರೀ ಬಿ.ಶಿವರಾಮು:- ಅಧ್ಯಕ್ಷರೇ, ಈಗ ಸನ್ಮಾನ್ಯ ನಂಜೇಗೌಡರು ಹೇಳಿದ ಹಾಗೆ 58ರಲ್ಲಿ ಅವರ ಹತ್ತಿರ ಈಗ ಇರತಕ್ಕಂಥಾದ್ದು 5 ಕಾವಲು ಮಾತ್ರ, ಉಳಿದಿದ್ದೆಲ್ಲವೂ ಬೇರೆಯವರಿಗೆ ವರ್ಗಮಾಡಿಯಾಗಿದೆ. ಈ ಕಾವಲುಗಾರರು ನಿರಂತರವಾಗಿ 5 ಎಕರೆ, 10 ಎಕರೆ, 20 ಎಕರೆ ಉತ್ತುಕೊಂಡು ಬರುತ್ತಿದ್ದಾರೆ. ನಮ್ಮ ಪ್ರಶ್ನೆ ಇಷ್ಟೇ ಇರತಕ್ಕಂಥಾದ್ದು, ಹಿಂದೆ ಚರ್ಚೆಯಾದಾಗ 5 ಎಕರೆ ಲ್ಯಾಂಡ್‌ಲೆಸ್ ಎನ್ನತಕ್ಕಂಥವರು ಯಾರಿದ್ದಾರೆ. ಅವರು ಉತ್ತುಕೊಂಡು ಬರುತ್ತಿರತಕ್ಕಂಥ ಭೂಮಿಯನ್ನು ಅವರಿಗೇ ಕೊಡಲು ತಿದ್ದುಪಡಿ ತನ್ನಿ ಎಂದು ಸರ್ಕಾರದಲ್ಲಿ ಈಗಾಗಲೇ ಅದು ಕಾನೂನು ಇಲಾಖೆಯಲ್ಲಿ ಇರತಕ್ಕಂಥದ್ದನ್ನು ಪರಿಶೀಲಿಸಿ ಎಂದು ನಾವು ಪ್ರಶ್ನೆ ಕೇಳುತ್ತಿರುವುದು. ಇಲಾಖೆಯಲ್ಲಿ ಪ್ರಸ್ತಾವನೆ ಎಲ್ಲಿದೆ. ಎಂದು ಇಲ್ಲಿಯವರೆಗೆ ಹುಡುಕಿಲ್ಲ.

ಅಧ್ಯಕ್ಷರು:- ಮತ್ತೆ ಉಪ ಪ್ರಶ್ನೆ ಬೇಡ. ಇದು ಕೊನೆಯದು ಆಯಿತು.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಏನೊಂದು ವ್ಯವಸ್ಥೆ ಇದೆ, 1958 ನೇ ಇಸವಿಯಿಂದ ಕಡೂರು ತಾಲ್ಲೂಕಿನಲ್ಲಿ ರೈತರಿಗೆ ಹುಳಿ ಸಾಗು ಎಂದು ಚಿಕ್ಕಬಾಸೂರು ಮತ್ತು ಬಿಳವಾಲು ಗ್ರಾಮಸ್ಥರಿಗೆ ಕೊಟ್ಟಿದ್ದಾರೆ. ಕಳೆದ ವರ್ಷ ಆ ರೈತರನ್ನು ಒತ್ತಾಯ ಮಾಡಿ ಅದನ್ನು ಬಿಡಿಸಿದರು ಈಗ ಅರಣ್ಯ ಇಲಾಖೆಗೆ ವಹಿಸಿದ್ದಾರೆ. ಇದನ್ನು ಕೂಡ ಸರ್ಕಾರ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎನ್.ರಾಜಣ್ಣ:- ಮೈಸೂರು ಮಹಾರಾಜರ ಕಾಲದಲ್ಲಿ 680 ಎಕರೆ ಏನು ಕೊಟ್ಟಿದ್ದರು, that was the best breeding centre of Amruthmahal. ಇಲ್ಲಿ ಅಮೃತ ಮಹಲ್‌ತಳಿಗಳು ಕಡಿಮೆಯಾಗಿ ರೈತರಿಗೆ ಅನಾನುಕೂಲವಾಗುತ್ತಿದೆ. ಈಗ ಅಮೃತ ಮಹಲ್ ತಳಿಗಳಾದ ಎತ್ತುಗಳು, ಹಸುಗಳು ಎಷ್ಟಿವೆ ಎಂದು ಲೆಕ್ಕ ಇದೆಯೇ ?

ಅಧ್ಯಕ್ಷರು:- ಅದು ಬೇರೆ ಪ್ರಶ್ನೆಯಾಗುತ್ತದೆ. ಈಗ ಅಮೃತ ಮಹಲ್ ಇಲ್ಲ. ಈಗ ಹೆಚ್.ಎಫ್.ಬಂದಿದೆಯಲ್ಲಾ. ನಿಂಗಯ್ಯನವರೇ ದಯಮಾಡಿ ತಾವು ಇಷ್ಟು ಮಾಡಿ. ಸನ್ಮಾನ್ಯ ನಂಜೇಗೌಡರು ಹೇಳಿದ್ದು, ಶ್ರೀಮಾನ್ ಶಿವರಾಮುರವರು ಹೇಳಿದ್ದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ನಾವು ಪರಿಶೀಲನೆ ಮಾಡುವುದಿಲ್ಲ ಎಂದು ಹೇಳುವುದಕ್ಕಿಂತಲೂ ಕೂಡ, ದಯಮಾಡಿ ತಾವು ಸಂಪುಟದ ಲ್ಲಿ ಚರ್ಚೆ ಮಾಡಿ ಮುಖ್ಯಮಂತ್ರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪುನರ್ ಪರಿಶೀಲನೆ ಮಾಡುವುದಕ್ಕೆ ಆಲೋಚನೆ ಮಾಡಿ. ಪರಿಶೀನೆ ಮಾಡುತ್ತೇವೆ ಎಂದು ಹೇಳಿ ಏಕೆಂದರೆ ಅದನ್ನೆ ನಂಬಿಕೊಂಡು ಅವರು ಜೀವನ ನಡೆಸುತ್ತಿರುವುದು ಬಹಳ ಮುಖ್ಯವಾದ ವಿಚಾರ.

ಶ್ರೀ ಬಿ.ಬಿ.ನಿಂಗಯ್ಯ:- ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಪರಿಶೀಲನೆ ಅಲ್ಲ ಸ್ವಾಮಿ, ನೀವು ಏನು ರೆವಿನ್ಯೂ ಪ್ರಕಾರ ಕೊಟ್ಟಿದ್ದೀರಿ ಅದನ್ನು ಅವರಿಗೆ ಕೊಡಬೇಕು. 1958 ನೇ ಇಸವಿಯಿಂದ ಹೊಡೆದು ಈಗ ಕೊಡುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು:- ಆಯಿತು. ಅದು ಜೆ ಡಿ ಎಲ್ ಪಿ ಪಾರ್ಟಿ ಮೀಟಿಂಗ್‌ನಲ್ಲಿ ಹೇಳಿದ್ದುದು.

ಇದು ಒಳ್ಳೆಯ ಕಥೆಯಾಯಿತಲ್ಲಾ ನಾನು ಅವರಿಗೆ ಏನೋ ಹೇಳಿದರೆ ಇಲ್ಲಿ ಇವರು ಎದ್ದು ನಿಂತಿದ್ದಾರೆ.

ವಿಷಯ:- ಬೀಡಿ ಕಾರ್ಮಿಕರಿಗೆ ನಿವೇಶನ '

ಶ್ರೀ ಕೆ. ಜಯರಾಂ ಶೆಟ್ಟಿ (ಉಳ್ಳಾಲ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 19 (04)

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿರುವ ಬೀಡಿ ಕಾಮ್ಮಿಕರ ಸಂಖ್ಯೆ ಎಷ್ಟು ? :- 2,43, 129 (ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ಇವರಲ್ಲಿ ನಿವೇಶನ ರಹಿತರ ಸಂಖ್ಯೆ ಎಷ್ಟು ? ಬೀಡಿ ಕಾರ್ಮಿಕರಿಗಾಗಿ ಸರ್ಕಾರ ಎಷ್ಟು ನಿವೇಶನಗಳನ್ನು ಒದಗಿಸಿದೆ ? ಎಷ್ಟು ಹಣ ಬಿಡುಗಡೆಯಾಗಿದೆ ? ಎಷ್ಟು ಹಣ ಖರ್ಚಾಗಿದೆ ? (ಜಿಲ್ಲಾವಾರು ವಿವರ ನೀಡುವುದು):- ಕಾರ್ಮಿಕ ಇಲಾಖೆಯಲ್ಲಿ ಬೀಡಿ ಕಾರ್ಮಿಕರಿಗೆ ನಿವೇಶನ ವಿತರಿಸುವ ಬಗ್ಗೆ ಯಾವುದೇ ಯೋಜನೆ ಇರುವುದಿಲ್ಲ.

ಇ) ಬೀಡಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮದ ಅನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಕಾರ್ಯಕ್ರಮ ಅಳವಡಿಸಲಾಗಿದೆ?:- ಬೀಡಿ ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ನೇರವಾಗಿ ಕೇಂದ್ರ ಸರ್ಕಾರವು ಜಾರಿಗೊಳಿಸುತ್ತಿದ್ದು, ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಅವರ ಮಕ್ಕಳ ವಿದ್ಯಾಭ್ಯಾಸ ಇವುಗಳ ಬಗ್ಗೆ ಕೇಂದ್ರ ಸರ್ಕಾರವು ಕಲ್ಯಾಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ) ಹೊಸ ನಮೂನೆಯ ಕಡಿಮೆ ಬೆಲೆಯ ಸಿಗರೇಟು ತಯಾರಿಕೆಯಿಂದಾಗಿ ರಾಜ್ಯದಲ್ಲಿ ಬೀಡಿ ಉದ್ಯಮಕ್ಕೆ ಧಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? :- ಹೌದು.

ಉ) ಹಾಗಿದ್ದಲ್ಲಿ ಇದಕ್ಕೆ ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?:- ಕೇಂದ್ರ ಸರ್ಕಾರವು ಈ ವಿಷಯದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ರಾಜ್ಯದಲ್ಲಿರುವ ಜಿಲ್ಲಾವಾರು ಬೀಡಿ ಕಾರ್ಮಿಕರ ಸಂಖ್ಯೆ

(ಏಪ್ರಿಲ್ 1996ರ ವರೆಗೆ)

ಕ್ರಮ ಸಂಖ್ಯೆ	ಜಿಲ್ಲೆಗಳು	ಬೀಡಿ ಕಾರ್ಮಿಕರ ಸಂಖ್ಯೆ
1.	ಬೆಂಗಳೂರು	10,224
2.	ಮೈಸೂರು	6,573
3.	ಬೆಳಗಾಂ	3,128
4.	ಹಾಸನ	1,208
5.	ಹುಬ್ಬಳ್ಳಿ (ಧಾರವಾಡ)	5,741
6.	ಚಿತ್ರದುರ್ಗ (ದಾವಣಗೆರೆ	4,985
7.	ಗುಲ್ಬರ್ಗಾ	823